o.s. 124/2009
Dt:02.07.2026

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 02.07.2026.

ಅಸಲು ದಾವಾ ನಂ. 124/2009

ಡಿ.ಡಬ್ಲ್ಯೂ-5

(ಮುಂದುವರಿದ ಪಾಟೀ ಸವಾಲು ಶ್ರೀ ಎ.ಎಸ್.ಎಂ. ವಕೀಲರಿಂದ ವಾದಿಯರ ಪರವಾಗಿ)

ನನ್ನ ತಂದೆ ಅವಿದ್ಯಾವಂತರಾಗಿದ್ದ ಕಾರಣ ಈ ದಾವೆಯಲ್ಲಿ ವಿಚಾರಣೆಗೆ ಹಾಜರಾಗಿರಲಿಲ್ಲ ಎಂದರೆ ಸುಳ್ಳು. ಯಾವುದೇ ಪತ್ರವಾಗಿದ್ದರೇ ವಿದ್ಯಾವಂತರಾಗಿರುವ ನನ್ನ ತಂದೆಯವರು ಅದನ್ನು ತಮ್ಮ ಲಿಖಿತ ಹೇಳಿಕೆಯಲ್ಲಿ ಬರೆಯಿಸುತ್ತಿದ್ದರು ಎಂದರೆ ನನಗೆ ಗೊತಿಲ್ಲ. ಲಿಖಿತ ಹೇಳಿಕೆಯಲ್ಲಿರುವ ಸಹಿ ನಮ್ಮ ತಂದೆಯದ್ದೇ ಎಂದರೆ ಸರಿ. ದಿಃ 21.07.2009ರಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ಹಾಗೂ ಪ್ರಮಾಣ ಪತ್ರವನ್ನು ನ್ಯಾ ಕ್ಕೆ ಸಲ್ಲಿಸಿದ್ದರು ಎಂದರೆ ಸರಿ. ನನಗೆ ಈಗ 60 ವರುಷ ವಯಸ್ಸು. ನಾನು ಹುಟ್ಟುವ ಮೊದಲು ನಮ್ಮ ತಂದೆ ಹಾಗೂ ಚಿಕ್ಕಪ್ಪಂದಿರು ಯಾವ ವ್ಯವಹಾರ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಬ್ಯಾಂಕ್ ವ್ಯವಹಾರ ಮಾಡುತ್ತಿದ್ದರು. ಎಷ್ಟು ವರುಷಗಳಳಿಂದ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಊರು ಹವೇರಹಳ್ಳಿ ಹಾಸನ ತಾಲ್ಲೂಕು. ಹಕ್ಕು ಖುಲಾಸೆ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. 1998-99 ರ ನೇ ಸಾಲಿನ ನಿಡಿ-7 ರಿಂದ 9ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮ ತಂದೆಯವರು ಜೀವಿತಾವಾಧಿಯಲ್ಲಿ ಸ್ವಯಾರ್ಜಿತ ಆಸ್ತಿ ಎಂದು ವಾದಿಯ ವಿರುದ್ದ ದಾವೆ ಹೂಡಿರುಲಿಲ್ಲ ಎಂದರೆ ಸರಿ. ನಮ್ಮ ತಂದೆಯವರು ಜೀವಿತಾವಾಧಿಯಲ್ಲಿ ಯಾವುದೇ ಹಿಸ್ಸೆ ಆಗಿರುವುದಿಲ್ಲ. ನಾವು ಜಂಟಿ ಕುಟುಂಬವಾಗಿರುತ್ತದೆ. ನಮ್ಮ ಕುಟುಂಬದಲ್ಲಿ ನನ್ನ ತಂದೆ ತಾಯಿ ನಾನು ಹಾಗೂ ನನ್ನ ತಂಗಿ ಇದ್ದೆವು. ನನಗೆ ಯಾವುದೇ ಆದಾಯ ಇರುವುದಿಲ್ಲ. ನನ್ನ ತಂದೆ ಪತ್ರ ವ್ಯವಹಾರ ಅಥವಾ ಕ್ರಯದ ಪತ್ರಗಳನ್ನು ಖುದ್ದಾಗಿ ನೋಡಿರುತ್ತೇನೆ. 5 ಮತ್ತು 6 ನೇ ಸರ್ವೆ ನಂ. ಪತ್ರಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಪತ್ರಗಳನ್ನು ನಮ್ಮ ತಂದೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ನಮ್ಮ ತಂದೆ ವಿದ್ಯಾವಂತರಾಗಿದ್ದರೇ ಅವರು ಪತ್ರ ವ್ಯವಹಾರ ಮಾಡಿದ್ದರೇ ಅದನ್ನು ಅವರ ಲಿಖಿತ ಪತ್ರದಲ್ಲಿ ಹೇಳಿರುತ್ತಿದ್ದರು ಎಂದರೆ ಅವರು ನ್ಯಾಯಾಲಯದ ಮುಂದೆ ಬರಲು

ಸಾಧ್ಯವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಹಿಂದಿನ ದಾವೆಯಲ್ಲಿ ನಾನು ಪಕ್ಷಗಾರರಾಗಿದ್ದೆನು ಎಂದರೆ ನಾನು ನನ್ನ ತಂದೆ ತೀರಿಕೊಂಡ ನಂತರ ನ್ಯಾ ಕ್ಕೆ ಬಂದಿರುತ್ತೇನೆ. ನನ್ನ ತಂದೆ ಈ ಹಿಂದಿನ ದಾವೆಯಲ್ಲಿ ಏನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ಈ ದಾವೆಯ ಬಗ್ಗೆ ಏನು ಮಾಹಿತಿ ಇಲ್ಲದೇ ನ್ಯಾ ದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ನಮ್ಮ ತಂದೆ ಮರಣ ಹೊಂದುವ ವರೆಗೆ ನನಗೆ ಮಾಹಿತಿ ಇರುವುದಿಲ್ಲ. ಅವರು ಮರಣ ಹೊಂದಿದ ನಂತರ ನಾನು ನ್ಯಾ ಕ್ಕೆ ಬಂದಿರುತ್ತೇನೆ. ನನ್ನ ತಂದೆ ಸತ್ತ ನಂತರ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ ದೀಪಿಕ ಎನ್.)
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು